ಓ.ಎಸ್.ನಂಃ 52/2020
**ಡಿಡಬ್ಲ್ಯೂ-2**

**ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 23.04.2026 ರಂದು ಪ್ರಮಾಣೀಕರಿಸಲಾಯಿತು.**
**ಮುಂದುವರೆದ ಪಾಟೀ ಸವಾಲು: ವಾದಿ ಪರ ವಕೀಲರಿಂದಃ**

ನನ್ನ ತಾಯಿ ಹೆಸರು ಹೊನ್ನಮ್ಮ ಎಂದರೆ ಸರಿ. ನಾನು ಮತ್ತು ನನ್ನ ತಾಯಿ ಈ ದಾವಾ ಸರ್ವೇ ನಂಬರ್ ನಲ್ಲಿ 1 ಎಕರೆ 30 ಗುಂಟೆಯನ್ನು ಶ್ರೀನಿವಾಸ್ ಐಯ್ಯಂಗರ್ ಎಂಬುವವರಿಗೆ ನಿಪಿ5 ರಂತೆ ಭೋಗ್ಯ ಮಾಡಿದ್ದೇವು ಎಂದರೆ ಸರಿ. ಸದರಿ ಭೋಗ್ಯವನ್ನು ರೂ.150/- ಕ್ಕೆ 30.04.1964 ರಲ್ಲಿ ಹಾಕಿದ್ದೇವು ಎಂದರೆ ಸರಿ. ನಿಪಿ5 ರ ಕಾಲಕ್ಕೆ ನನ್ನ ತಮ್ಮ ಚಿಕ್ಕರಂಗಯ್ಯರವರಿಗೆ 8 ವರ್ಷಗಳಿಗಿಂತಲೂ ಕಡಿಮೆ ವಯಸ್ಸು ಆಗಿತ್ತು. ನಿಪಿ5 ರಂತೆ ಭೋಗ್ಯ ಮಾಡಿದ್ದ ಜಮೀನು ದಾವಾ ಸರ್ವೇ ನಂಬರ್ ನ ಒಳಭಾಗದ ಪೂರ್ವದ ಕಡೆಗೆ ಬರುತ್ತದೆ ಎಂದರೆ ಸರಿ. ನಾನು ಮತ್ತು ನನ್ನ ತಮ್ಮ ಚಿಕ್ಕರಂಗಯ್ಯ ತಲಾ 35 ಗುಂಟೆ ಜಮೀನನ್ನು ವಿಭಾಗ ಮಾಡಿಕೊಂಡೇವು ಎಂದರೆ ಸರಿ. ಉತ್ತರದ ಕಡೆಗೆ 35 ಗುಂಟೆ ನನಗೆ, ದಕ್ಷಿಣದ ಕಡೆಗೆ 35 ಗುಂಟೆ ನನ್ನ ತಮ್ಮ ಚಿಕ್ಕರಂಗಯ್ಯನಿಗೆ ಪಾಲು ಆಗಿತ್ತು ಎಂದರೆ ಸರಿ.

ಪಶ್ಚಿಮಕ್ಕೆ ಗೋಪಾಲಯ್ಯರವರಿಗೆ 1 ಎಕರೆ 8 ಗುಂಟೆ ವಿಭಾಗಕ್ಕೆ ಬಂದಿತ್ತು ಎಂದರೆ ಸರಿ. ಗೋಪಾಲಯ್ಯನ ಮಗನ ಹೆಸರು ರಂಗಯ್ಯ ಎಂದರೆ ಸರಿ. ಸದರಿ ರಂಗಯ್ಯ ಆ ಸ್ವತ್ತನ್ನು ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ಗೋಪಾಲಯ್ಯರವರ ಸ್ವತ್ತಿನ ಪಶ್ಚಿಮಕ್ಕೆ-ಕಾವೇರಯ್ಯ ಮತ್ತು ಸಜ್ಜಯ್ಯ ರವರಿಗೆ ವಿಭಾಗದ ಮೂಲಕ ಜಮೀನು ಬಂದಿತ್ತು ಎಂದರೆ ಸರಿ. ಕಾವೇರಯ್ಯ ಮೃತ ಹೊಂದಿದ ನಂತರ ಆತನ ಮಕ್ಕಳು ಸದರಿ ಸ್ವತ್ತಿನಲ್ಲಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ. ಸಜ್ಜಯ್ಯ ತಮ್ಮ ಸ್ವತ್ತನ್ನು ನಾಗಪ್ಪ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಗೋಪಾಲಯ್ಯನ ಹೆಂಡತಿ ಜವಾಜಮ್ಮ ಎಂದರೆ ಸರಿ. ನನ್ನ ತಾಯಿ ಮತ್ತು ಜವಾಜಮ್ಮ ಅಕ್ಕ-ತಂಗಿಯರು ಎಂದರೆ ಸರಿ. ದಾವೆಯನ್ನು ಗೋಪಾಲಯ್ಯನ ಮೊಮ್ಮಕ್ಕಳು ಹೂಡಿದ್ದಾರೆ ಎಂದರೆ ಸರಿ. ದಾವೆ ದಾಖಲಿಸಿದ ನಂತರ ನನಗೂ ಮತ್ತು ಒಂದನೇ ಪ್ರತಿವಾದಿಗೂ ವೈಮನಸ್ಸು ಬಂತು

ಎಂದರೆ ಸರಿ. ನನ್ನ ತಮ್ಮ ಮಾಡಿಕೊಂಡ ನಿಪಿ6 ಪಾಲುಪಾರಿಕತ್ತಿನಲ್ಲಿ ಏನೂ ಬರೆದಿದೆ ಎಂದು ನನಗೆ ಗೊತ್ತಿಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ